**All India Radio: Bangalore**
**National Bulletin In Kannada**
**25.03.2025 13.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**25.03.2025 13.10 p.m.**

**<><><><>**

ಮುಖ್ಯಾಂಶಗಳು

- ಅಮೆರಿಕದ ಅಧಿಕಾರಿಗಳ ನಿಯೋಗ ಇಂದಿನಿಂದ ಭಾರತ ಪ್ರವಾಸ; ವ್ಯಾಪಾರ-ವಾಣಿಜ್ಯ ಸಂಬಂಧಗಳ ಕುರಿತಂತೆ ಮಾತುಕತೆ
- ಜಮ್ಮು-ಕಾಶ್ಮೀರ ಭಾರತದ ಅವಿಭಾಜ್ಯ ಅಂಗ- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಪುನರುಚ್ಚರಿಸಿದ ಭಾರತ
- ೨೦೨೬ರ ಹಣಕಾಸು ವರ್ಷದಲ್ಲಿ ಭಾರತದ ಜಿ.ಡಿ.ಪಿ ಶೇಕಡಾ. ೬.೫ ರಷ್ಟು ಬೆಳವಣಿಗೆ: ಗ್ಲೋಬಲ್ ರೇಟಿಂಗ್ ಸಂಸ್ಥೆ ವರದಿ
- ಮಿಯಾಮಿ ಓಪನ್ ಟೆನಿಸ್; ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಭಾರತದ ಯೂಕಿ ಭಾಂಬ್ರಿ ಜೋಡಿ
- ಐಪಿಎಲ್ ಟಿ-೨೦ ಕ್ರಿಕೆಟ್; ಅಹಮಾದಾಬಾದ್‌ನಲ್ಲಿಂದು ಪಂಜಾಬ್ ಕಿಂಗ್ಸ್-ಗುಜರಾತ್ ಟೈಟನ್ಸ್ ಹಣಾಹಣಿ

<><><><>

ಅಮೆರಿಕದ ಅಧಿಕಾರಿಗಳ ನಿಯೋಗವು ಇಂದಿನಿಂದ ಇದೇ ೨೯ರವರೆಗೆ, ಭಾರತೀಯ ಅಧಿಕಾರಿಗಳೊಂದಿಗೆ, ಉಭಯ ದೇಶಗಳ ನಡುವಿನ ವ್ಯಾಪಾರ ಮಾತುಕತೆಗಾಗಿ ಭಾರತಕ್ಕೆ ಭೇಟಿ ನೀಡಲಿದೆ ಎಂದು ಅಮೆರಿಕಾ ರಾಯಭಾರಿ ಕಚೇರಿಯ ವಕ್ತಾರರು ತಿಳಿಸಿದ್ದಾರೆ. ಭಾರತ ಸೇರಿದಂತೆ ವಿವಿಧ ದೇಶಗಳ ಮೇಲೆ ಪರಸ್ಪರ ಸುಂಕಗಳನ್ನು ವಿಧಿಸುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಾರ್ಯಯೋಜನೆಯ ಹಿನ್ನೆಲೆಯಲ್ಲಿ ಈ ಭೇಟಿ ಇರಲಿದೆ. ಏಪ್ರಿಲ್ ೨ ರಿಂದ ಈ ಸುಂಕಗಳು ಜಾರಿಗೆ ಬರುವ ನಿರೀಕ್ಷೆಯಿರುವುದರಿಂದ ಅಮೆರಿಕದ ವ್ಯಾಪಾರ ಅಧಿಕಾರಿಗಳ ಈ ಭೇಟಿ ಮಹತ್ವವನ್ನು ಪಡೆಯುತ್ತದೆ. ಸುಂಕ-ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಮತ್ತು ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಚೌಕಟ್ಟನ್ನು ಅಂತಿಮಗೊಳಿಸಲು ಭಾರತ

ಮತ್ತು ಅಮೆರಿಕ ಚರ್ಚೆಗಳಲ್ಲಿ ತೊಡಗಿರುವಾಗ, ಟ್ರಂಪ್ ಆಡಳಿತವು ಪ್ರಸ್ತಾವಿತ ಪರಸ್ಪರ ಸುಂಕಗಳಿಂದ ವಿನಾಯಿತಿ ನೀಡಬಹುದು ಎಂದು ಭಾರತ ಸ್ಪಷ್ಟ ನಿರೀಕ್ಷೆಯಲ್ಲಿದೆ.

<><><><>

ಒಂದು ರಾಷ್ಟ್ರ ಒಂದು ಚುನಾವಣೆ ಕುರಿತ ಜಂಟಿ ಸಂಸದೀಯ ಸಮಿತಿಯು ಇಂದು ನವದೆಹಲಿಯ ಸಂಸತ್ತಿನ ಅನೆಕ್ಸ್‌ನಲ್ಲಿ ಸಭೆ ಸೇರಲಿದೆ. ಸಮಿತಿಯು ದೆಹಲಿ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ, ಪ್ರಸ್ತುತ ಟೆಲಿಕಾಂ ವಿವಾದ ಇತ್ಯರ್ಥ ಮತ್ತು ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ, ನ್ಯಾಯಮೂರ್ತಿ ಡಿ ಎನ್ ಪಟೇಲ್ ಅವರೊಂದಿಗೆ ಸಂವಾದ ನಡೆಸಲಿದೆ. ಇದರ ನಂತರ, ಸಮಿತಿಯು ಭಾರತದ ಅಟಾರ್ನಿ ಜನರಲ್ ಆರ್ ವೆಂಕಟರಮಣಿ ಅವರನ್ನು ಭೇಟಿ ಮಾಡಲಿದೆ. ಸಮಿತಿಯ ಮುಂದಿನ ಸಭೆ ಎಪ್ರಿಲ್ ತಿಂಗಳ ೨ ನೇ ತಾರೀಖಿನಂದು ನಡೆಯಲಿದ್ದು, ಇದರಲ್ಲಿ ಇಬ್ಬರು ಗಣ್ಯ ವ್ಯಕ್ತಿಗಳೊಂದಿಗೆ ಸಂವಾದ ನಡೆಯಲಿದೆ.

<><><><>

ಜಮ್ಮು ಮತ್ತು ಕಾಶ್ಮೀರ ಯಾವಾಗಲೂ ಭಾರತದ ಅವಿಭಾಜ್ಯ ಅಂಗವಾಗಿರುತ್ತದೆ ಎಂದು ಭಾರತ ಪುನರುಚ್ಚರಿಸಿದೆ. ವಿಶ್ವಸಂಸ್ಥೆಯ ಶಾಂತಿಪಾಲನಾ ಸುಧಾರಣೆಗಳ ಕುರಿತು ಚರ್ಚೆಯ ಸಂದರ್ಭದಲ್ಲಿ ಪಾಕಿಸ್ತಾನವು ಈ ಪ್ರದೇಶದ ಬಗ್ಗೆ ಪದೇ ಪದೇ ಉಲ್ಲೇಖಿಸಿದ್ದನ್ನು ತೀವ್ರವಾಗಿ ಖಂಡಿಸಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಾತನಾಡಿದ, ಭಾರತದ ಖಾಯಂ ಪ್ರತಿನಿಧಿ, ರಾಯಭಾರಿ ಪರ್ವತನೇನಿ ಹರೀಶ್, ಪಾಕಿಸ್ತಾನದ ಹೇಳಿಕೆಗಳನ್ನು ಅನಗತ್ಯ ಎಂದರು ಮತ್ತು ಜಮ್ಮು ಮತ್ತು ಕಾಶ್ಮೀರ ಹಿಂದೆ ಭಾರತದ ಅವಿಭಾಜ್ಯ ಅಂಗವಾಗಿತ್ತು, ಇದೆ ಮತ್ತು ಯಾವಾಗಲೂ ಇರುತ್ತದೆ ಎಂದು ಪುನರುಚ್ಚರಿಸಿದರು. ಪಾಕಿಸ್ತಾನವು ಜಮ್ಮು ಮತ್ತು ಕಾಶ್ಮೀರದ ಒಂದು ಭಾಗವನ್ನು ಅಕ್ರಮವಾಗಿ ಆಕ್ರಮಿಸಿಕೊಂಡಿದ್ದು, ಅದನ್ನು ಖಾಲಿ ಮಾಡಬೇಕು ಎಂದು ಅವರು ಹೇಳಿದರು. ಇಂತಹ ಪುನರಾವರ್ತಿತ ಉಲ್ಲೇಖಗಳು ಪಾಕಿಸ್ತಾನದ ಕಾನೂನುಬಾಹಿರ ಹಕ್ಕುಗಳನ್ನು ದೃಢೀಕರಿಸುವುದಿಲ್ಲ ಅಥವಾ ಅದರ ರಾಜ್ಯ ಪ್ರಾಯೋಜಿತ ಗಡಿಯಾಚೆಗಿನ ಭಯೋತ್ಪಾದನೆಯನ್ನು ಸಮರ್ಥಿಸುವುದಿಲ್ಲ ಎಂದು ಅವರು ಒತ್ತಿ ಹೇಳಿದರು.

ಶಾಂತಿಪಾಲನೆಯ ಕುರಿತಾದ ಪ್ರಮುಖ ಚರ್ಚೆಗಳಿಂದ "ಗಮನವನ್ನು ಬೇರೆಡೆ ಸೆಳೆಯಲು" ಪ್ರಯತ್ನಿಸುತ್ತಿರುವ ಪಾಕಿಸ್ತಾನವನ್ನು ಭಾರತದ ಖಾಯಂ ಪ್ರತಿನಿಧಿ ಖಂಡಿಸಿದರು.

<><><><>

ರಷ್ಯಾ ದೇಶವು ಭಾರತದೊಂದಿಗೆ ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಹೇಳಿದ್ದಾರೆ. ರಷ್ಯಾದ ಸುದ್ದಿ ಸಂಸ್ಥೆ ವರದಿ ಮಾಡಿದಂತೆ ಅಲೆಕ್ಸಾಂಡರ್ ಗೋರ್ಚಕೋವ್ ಸಾರ್ವಜನಿಕ ರಾಜತಾಂತ್ರಿಕ ನಿಧಿಯ ಟ್ರಸ್ಟಿಗಳ ಮಂಡಳಿ ಸಭೆಯನ್ನುದ್ದೇಶಿಸಿ ಸಚಿವ ಲಾವ್ರೊವ್ ಮಾತನಾಡಿದರು. ಚೀನಾ, ಭಾರತ, ಇರಾನ್, ಉತ್ತರ ಕೊರಿಯಾ, ಹಾಗೂ ಸ್ವಾತಂತ್ರ್ಯ ಕಾಮನ್‌ವೆಲ್ತ್ ದೇಶಗಳು ಸೇರಿದಂತೆ ಬಹುಪಾಲು ಜಾಗತಿಕ ರಾಷ್ಟ್ರಗಳೊಂದಿಗೆ ರಷ್ಯಾ ಸಂಬಂಧಗಳನ್ನು ಸಕ್ರಿಯವಾಗಿ ವಿಸ್ತರಿಸುತ್ತಿದ್ದು, ಬಹುಪಾಲು ಜಾಗತಿಕ ರಾಷ್ಟ್ರಗಳೊಂದಿಗೆ ಸಂಬಂಧಗಳನ್ನು ಹೆಚ್ಚಿಸಲು ಮತ್ತು ಚೀನಾದೊಂದಿಗೆ ಸಮಗ್ರ ಪಾಲುದಾರಿಕೆ ಮತ್ತು ಕಾರ್ಯತಂತ್ರದ ಸಹಕಾರದ ಸಂಬಂಧಗಳನ್ನು ಹೆಚ್ಚಿಸುವ ಆದ್ಯತೆ ಕುರಿತು ಅವರು ಮಾತನಾಡಿದರು.

<><><>

ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ನಾಗಾಲ್ಯಾಂಡ್ ಸರ್ಕಾರವು ನಿರ್ದೇಶನಾಲಯ ಮಟ್ಟದಲ್ಲಿ ಸೌರ ಮಿಷನ್ ತಂಡ ಮತ್ತು ಸಚಿವಾಲಯ ಮಟ್ಟದಲ್ಲಿ ಸೌರ ಮಿಷನ್ ಕೋಶವನ್ನು ಸ್ಥಾಪಿಸಲಿದೆ. ಈ ಉಪಕ್ರಮವು ನಾಗಾಲ್ಯಾಂಡ್‌ನಾದ್ಯಂತ ವಸತಿ ಮನೆಗಳಲ್ಲಿ ಮೇಲ್ಛಾವಣಿ ಸೌರ ಫಲಕಗಳ ಅಳವಡಿಕೆಯನ್ನು ಸುಗಮಗೊಳಿಸುವ ಗುರಿಯನ್ನು ಹೊಂದಿದೆ. ಮಾರ್ಚ್ ೧೪ ರಂದು ಕೊಹಿಮಾದಲ್ಲಿ ನಡೆದ ನಾಗಾಲ್ಯಾಂಡ್ ಸೌರ ಮಿಷನ್‌ನ ಮೊದಲ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

<><><>

೨೦೨೬ರ ಹಣಕಾಸು ವರ್ಷದಲ್ಲಿ ಭಾರತದ ಜಿಡಿಪಿ ಶೇಕಡ ೬.೫ರಷ್ಟು ಬೆಳವಣಿಗೆ ಕಾಣಲಿದೆ ಎಂದು ಗ್ಲೋಬಲ್ ರೇಟಿಂಗ್ ಸಂಸ್ಥೆ - ಎಸ್ ಅಂಡ್ ಪಿ ತಿಳಿಸಿದೆ. ಜಾಗತಿಕ ಅನಿಶ್ಚಿತತೆಗಳ ನಡುವೆಯೂ ಏಷ್ಯಾ ಪೆಸಿಫಿಕ್ ಪ್ರದೇಶದಲ್ಲಿ ಭಾರತದ ಆರ್ಥಿಕತೆ ಸ್ಥಿರವಾಗಿದೆ. ಬಜೆಟ್‌ನಲ್ಲಿ ಘೋಷಿಸಲಾದ ತೆರಿಗೆ ಪ್ರಯೋಜನಗಳು, ಕಡಿಮೆ ಸಾಲ ವೆಚ್ಚಗಳು ಆರ್ಥಿಕ ಬೆಳವಣಿಗೆಗೆ ಕಾರಣವಾಗಿದೆ. ಆಹಾರ ಹಣ ದುಬ್ಬರವನ್ನು ಕಡಿಮೆ ಮಾಡುವುದು ಮತ್ತು ಕಚ್ಚಾತೈಲ ಬೆಲೆಗಳನ್ನು ಕಡಿಮೆ ಮಾಡುವುದರಿಂದ ಹಣಕಾಸು ನಿಯಂತ್ರಣ ಸಾಧ್ಯ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

<><><>

ದೆಹಲಿ ವಿಧಾನಸಭೆಯಲ್ಲಿ ೨೦೨೫-೨೬ನೇ ಸಾಲಿನ ಆಯವ್ಯಯ ಮಂಡಿಸುತ್ತಿರುವ ಮುಖ್ಯಮಂತ್ರಿ ರೇಖಾಗುಪ್ತ ಅವರು ೧ ಲಕ್ಷ ಸಾವಿರ ಕೋಟಿ ರೂಪಾಯಿಗಳ ಬೃಹತ್ ಬಜೆಟ್ ಮಂಡಿಸುತ್ತಿದ್ದಾರೆ. ಬಡತನ ರೇಖೆಗಿಂತ ಕೆಳವರ್ಗದ ಜನತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಪ್ರಮುಖ ಧ್ಯೇಯವಾಗಿದೆ. ಕೊಳೆಗೇರಿಗಳು ಮತ್ತು ಗುಡಿಸಲುಗಳಲ್ಲಿ ವಾಸಿಸುವ ಜನರ ಅಭಿವೃದ್ಧಿಗಾಗಿ ತಮ್ಮ ಸರ್ಕಾರ ದೆಹಲಿ ನಗರ ಆಶ್ರಯ ಸುಧಾರಣಾ ಮಂಡಳಿಗೆ ೬೯೬ ಕೋಟಿ ರೂಪಾಯಿ ಹಂಚಿಕೆ ಮಾಡಲಿದೆ ಎಂದು ಅವರು ಹೇಳಿದ್ದಾರೆ. ಪ್ರತಿಯೊಂದು ಮನೆಗೂ ಸ್ವಚ್ಛ ಕುಡಿಯುವ ನೀರು ಪೂರೈಸಲಾಗುವುದು. ಚರಂಡಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವುದು, ನೀರು ಸರಬರಾಜು ಮತ್ತು ನಗರದಲ್ಲಿ ನೈರ್ಮಲ್ಯ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಲು ೯ ಸಾವಿರ ಕೋಟಿ ರೂಪಾಯಿ ಹಂಚಿಕೆ ಮಾಡಲಾಗಿದೆ.

<><><>

ಟೆನಿಸ್‌ನಲ್ಲಿ, ಭಾರತದ ಯೂಕಿ ಭಾಂಬ್ರಿ ಮತ್ತು ಅವರ ಪೋರ್ಚುಗೀಸ್ ಸಹ-ಅಟಗಾರ ನುನೊ ಬೋರ್ಗೆಸ್, ಇಂದು ಬೆಳಿಗ್ಗೆ ಮಿಯಾಮಿ ಓಪನ್‌ನ ಪುರುಷರ ಡಬಲ್ಸ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ. ಭಾಂಬ್ರಿ ಮತ್ತು ಬೋರ್ಗೆಸ್ ಪ್ರಿ-ಕ್ವಾರ್ಟರ್ ಫೈನಲ್‌ನಲ್ಲಿ ಜೆಕಿಯಾದ ಆಡಮ್ ಪಾವ್ಲಾಸೆಕ್ ಮತ್ತು ಯುನೈಟೆಡ್ ಕಿಂಗ್‌ಡಮ್‌ನ ಜೇಮಿ ಮುರ್ರೆ ಅವರನ್ನು ೭-೬, ೬-೨ ಸೆಟ್‌ಗಳಿಂದ ಸೋಲಿಸಿದರು. ಭಾರತ - ಪೋರ್ಚುಗೀಸ್‌ನ ಈ ಜೋಡಿಯು ನಾಳೆ ಕ್ವಾರ್ಟರ್ ಫೈನಲ್‌ನಲ್ಲಿ ಯುನೈಟೆಡ್ ಕಿಂಗ್‌ಡಮ್ ಜೋಡಿ ಲಾಯ್ಡ್ ಗ್ಲಾಸ್‌ಪೂಲ್ ಮತ್ತು ಜೂಲಿಯನ್ ಕ್ಯಾಶ್ ಅವರನ್ನು ಎದುರಿಸಲಿದೆ.

<><><>

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಇಂಡಿಯನ್ ಪ್ರಿಮಿಯರ್ ಲೀಗ್-ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯಲ್ಲಿ ಗುಜರಾತ್ ಟೈಟಾನ್ಸ್ ಮತ್ತು ಪಂಜಾಬ್ ಕಿಂಗ್ಸ್ ವಿರುದ್ಧ ಸೆಣಸಲಿದೆ. ಪಂದ್ಯ ಸಂಜೆ ೭:೩೦ಕ್ಕೆ ಆರಂಭವಾಗಲಿದೆ.

<><><>

ನ್ಯೂಜಿಲೆಂಡ್‌ನ ರಿವರ್ಟನ್ ಕರಾವಳಿಯಲ್ಲಿ ಇಂದು ೬.೮ ತೀವ್ರತೆಯ ಭೂಕಂಪ ಸಂಭವಿಸಿದೆ. ೧೦ ಕಿಲೋಮೀಟರ್ ಆಳದಲ್ಲಿ ಸಂಭವಿಸಿದ ಭೂಕಂಪವು ಆರಂಭದಲ್ಲಿ ೭ ತೀವ್ರತೆಯಲ್ಲಿ ದಾಖಲಾಗಿತ್ತು. ನ್ಯೂಜಿಲೆಂಡ್‌ನ ರಾಷ್ಟ್ರೀಯ ತುರ್ತು ನಿರ್ವಹಣಾ ಸಂಸ್ಥೆ ಪ್ರಸ್ತುತ ಭೂಕಂಪದ

ಅಂದಾಜು ಮಾಡುತ್ತಿದೆ. ಭೂಕಂಪವು ಬಲವಾದ ಮತ್ತು ಅಸಾಮಾನ್ಯ ಪ್ರವಾಹಗಳ ಅಪಾಯವನ್ನು ಉಂಟು ಮಾಡಬಹುದಾಗಿದ್ದು, ಸೌತ್‌ಲ್ಯಾಂಡ್ ಮತ್ತು ಫಿಯಾರ್ಡ್‌ಲ್ಯಾಂಡ್‌ನ ನಿವಾಸಿಗಳು ಬೀಚ್ ಮತ್ತು ಸಮುದ್ರ ಪ್ರದೇಶಗಳಿಂದ ದೂರವಿರಲು ಸಂಸ್ಥೆ ಸೂಚಿಸಿದೆ.

<><><><>

ಕೇಂದ್ರ ಸರ್ಕಾರದ ಹೊಸ ಹಣಕಾಸು ಕಾರ್ಯದರ್ಶಿಯಾಗಿ, ಕರ್ನಾಟಕ ಕೇಡರ್‌ನ ೧೯೮೭ ರ ಬ್ಯಾಚ್‌ನ ಐಎಎಸ್ ಅಧಿಕಾರಿ ಅಜಯ್ ಸೇಠ್ ಅವರನ್ನು ನೇಮಿಸಲಾಗಿದೆ. ಸೇಠ್ ಪ್ರಸ್ತುತ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿದ್ದಾರೆ. ಸಿಬ್ಬಂದಿ ಸಚಿವಾಲಯ ಹೊರಡಿಸಿದ ಅಧಿಕೃತ ಆದೇಶದಲ್ಲಿ ಅಜಯ್ ಸೇಠ್ ಅವರನ್ನು ಹಣಕಾಸು ಕಾರ್ಯದರ್ಶಿಯಾಗಿ ನೇಮಿಸಲು ಸಂಪುಟದ ನೇಮಕಾತಿ ಸಮಿತಿ ಅನುಮೋದನೆ ನೀಡಿದೆ ಎಂದು ತಿಳಿಸಲಾಗಿದೆ.

<><><><>

ದೇಶದ ಒಟ್ಟು ಅರಣ್ಯ ಮತ್ತು ಮರಗಳ ವ್ಯಾಪ್ತಿಯು ಎಂಟು ಲಕ್ಷ ೨೭ ಸಾವಿರ ಚದರ ಕಿಲೋಮೀಟರ್‌ಗಳಿಗಿಂತ ಹೆಚ್ಚಿದ್ದು, ಇದು ದೇಶದ ಭೌಗೋಳಿಕ ಪ್ರದೇಶದ ಶೇಕಡಾ ೨೫ ಕ್ಕಿಂತ ಹೆಚ್ಚು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>